'ಸುತ್ತಿ ಬಳಸಿ ಮಾತಾಡೋದು ಬೇಡ, ಪಾಂಬು. ಅವನು ಯಾರೂ ಅನ್ನೋದು ಈಗಾಗಲೇ ಇಲಾಖೆಗೆ ಗೊತ್ತಾಗಿದೆ. ಅವನನ್ನು ಹಿಡಿಯೋ ಕಾರ್ಯಾಚರಣೆ ನಡೆಯುತ್ತಿದೆ'

ಪಾಂಬು ಹೇಳಬೇಕಿರುವ ಸತ್ಯ ಅಧಿಕಾರಿಗೆ ಗೊತ್ತಿದೆ!? ಆದರೂ ಪಾಂಬುವಿಗೆ ಆ ಸತ್ಯವನ್ನು ಅಧಿಕಾರಿಗೆ ಹೇಳಲೇ ಬೇಕೆನ್ನುವ ಇಚ್ಛೆ.

'ಸಾಹೇಬ್ರೆ, ಅವನು ಸಾಮಾನ್ಯ ಅಂದುಕೊಳ್ಳಬೇಡಿ. ಲಹರಿಯನ್ನು ಸುತ್ತಾಡಿಸ್ತಿದ್ದೋನು ಹಿತೇಶ ಅಲ್ಲ'

ಇನ್ಸ್‌ಪೆಕ್ಟರ್ ರಾಜಧಾನಿ ಯಾವುದೇ ಆವೇಶಕ್ಕೊಳಗಾಗದೆ ಪಾಂಬುವಿನ ಮುಖವನ್ನೇ ನೋಡಿ ಹೇಳಿದ.

'ನೀನು ಹೇಳುತ್ತಿರುವುದು ಕಾಕುಟ್ಟನ ಬಗ್ಗೇಂತ ನಮಗೆ ಗೊತ್ತಿದೆ, ಪಾಂಬು. ಅವನು ಹೈದರಾಬಾದಿಗೆ ಹೋಗಿರೋ ಸುದ್ದೀನೂ ನಮಗೆ ತಲುಪಿದೆ. ಈಗ ನಮ್ಮ ಇಲಾಖೆ ಅವನ ಹಿಂದೆ ಬಿದ್ದಿದೆ'

ಪಾಂಬು ಅಧಿಕಾರಿಯ ಮಾತಿಗೆ ಅಡ್ಡಡ್ಡಲಾಗಿ ತಲೆಯಲುಗಿಸಿದ.

'ನಾನು ಹೇಳ್ತಾ ಇರೋದು ಕಾಕುಟ್ಟನ ಬಗ್ಗೆ ಅಲ್ಲ...'

'ಮತ್ತೆ..?'

ಪಾಂಬು ಅಧಿಕಾರಿಯ ಮುಖದಲ್ಲಿದ್ದ ಕುತೂಹಲ ಕಂಡು ಮುಂದಕ್ಕೆ ಬಾಗಿ ಮೆಲ್ಲಗೆ ಪಿಸುಗಿದ.

ಇನ್ಸ್‌ಪೆಕ್ಟರ್ ರಾಜಧಾನಿಯ ಬಾದಾಮಿಯಾಕಾರದ ಕಣ್ಣುಗಳಲ್ಲಿ ಹೊಳಪು ಮೂಡಿ ಮರೆಯಾಯಿತು.

***

ವೇಗವಾಗಿ ಬಂದ ಕಾರು ಬಂಡೆಯ ಎದುರಿಗೆ ಗಕ್ಕನೆ ನಿಂತಿತು. ಕಾರಿನ ಒಳಗಿದ್ದ ಕಿರಣ ಡ್ರೈವಿಂಗ್ ಸೀಟ್‌ನಲ್ಲಿ ಕುಳಿತು ಬಂಡೆಯತ್ತಲೇ ನೋಡುತ್ತಿದ್ದ ಮೇನಕಾಳನ್ನು ದಿಟ್ಟಿಸಿದ. ಅವಳ ಮುಖದಲ್ಲಿ ಗೊಂದಲವಿರುವುದು ಸ್ಪಷ್ಟವಾಗಿತ್ತು. ಕಿರಣ ಮಾತಾಡದೆ ಸುಮ್ಮನೆ ಕುಳಿತು ಅವಳ ಗೊಂದಲ ನಿವಾರಣೆಗೆ ಮಾರ್ಗವನ್ನು ಕಂಡುಕೊಳ್ಳುವಂತೆ ಇದ್ದ.

'ಈಗೇನ್ಮಾಡೋದು' ಆತಂಕವಿತ್ತು ಮೇನಕಾಳ ಮಾತಿನಲ್ಲಿ. ನೋಟ ಮಾತ್ರ ಎದುರಿಗಿತ್ತು.

'ಅಂದ್ರೆ, ಏನು?'

ಕಿರಣನ ಪ್ರಶ್ನೆಗೆ ತತ್‌ಕ್ಷಣ ಅವನತ್ತ ನೋಟ ಹರಿಸಿದಳು. ಅವನ ಮುಖದಲ್ಲಿರುವ ನಿರ್ಲಿಪ್ತ ಭಾವವನ್ನು ಓದಲಾರದೆ ಮಾತು ತೆಗೆದಳು.

'ಚಿಕ್ಕಮ್ಮ ಬಂದಿರೋ ಕಾರು ಕಾಣಿಸ್ತಿಲ್ಲ. ಅವರನ್ನು ಕಾಕುಟ್ಟ ಕರೆಸಿಕೊಂಡಿದ್ದಾನೆ ಅಂದುಕೊಂಡಿದ್ದೆ'

ಮೇನಕಾಳ ಮಾತಿಗೆ ಕಿರಣನ ನೋಟ ಸುತ್ತೆಲ್ಲಾ ದೃಷ್ಟಿಸಿತು. ಯಾವುದೇ ವಾಹನದ ಸುಳಿವಿರಲಿಲ್ಲ. ಕಾಶಮ್ಮನನ್ನು ಕರೆದುಕೊಂಡು ಬಂದ ವಾಹನ ಅವರನ್ನು ಇಳಿಸಿ ವಾಪಾಸು ಹೋಗಿರಬೇಕು. ಹಾಗಾದರೆ ಕಾಶಮ್ಮ 'ಬಂಡೆ'ಯ ಒಳಗಿದ್ದಾರೆ. ಆಲೋಚನೆಗೊಳಗಾದ ಕಿರಣ ಮೇನಕಾಳಿಗೆ ಕುಳಿತಿರುವಂತೆ ಸೂಚಿಸಿದ.

'ನೀನು ಎಲ್ಲಿಗೆ ಹೋಗ್ತಿದ್ದೀಯಾ?' ಗೊಂದಲದಲ್ಲಿರುವವಳ ಮತ್ತೊಂದು ಪ್ರಶ್ನೆ.

'ಎಲ್ಲೂ ಹೋಗ್ತಾ ಇಲ್ಲ. ಕಾಕುಟ್ಟನ ಅರಮನೆಯನ್ನೊಮ್ಮೆ ನೋಡಿಕೊಂಡು ಬರೋಣಾಂತ'

ಕಾಕುಟ್ಟ ಕಾಶಮ್ಮನನ್ನು 'ಬಂಡೆ'ಯೊಳಗೆ ಕರೆದುಕೊಂಡು ಹೋಗುವ ಸಾಧ್ಯತೆ ಇರಲಾರದೆನಿಸಿತು. ಆದರೂ ಸಾಧ್ಯತೆಯನ್ನು ಅಲ್ಲಗಳೆಯಲಾಗ ದಿರುವುದರಿಂದ ಒಮ್ಮೆ ಒಳಗೆ ಕಣ್ಣಾಡಿಸಿ ಬರುವುದು ಒಳ್ಳೆಯದೆನಿಸಿತು.

ಮೇನಕಾಗೆ ಕಿರಣನ ಮಾತು ಸರಿಯಾಗಿ ಅರ್ಥವಾಗಲಿಲ್ಲ.

'ವ್ಯಂಗ್ಯ ಮಾತಾಡ್ಬೇಡ. ಕಾಕುಟ್ಟನ ಅರಮನೆ ಯಾವುದು?'

'ಎದುರಿಗೆ ಕಾಣಿಸ್ತಿದೆಯಲ್ಲ, ಅದೇ. ಕಾಶಮ್ಮ ಅವನ ಜೊತೆಗೆ ಬಂದಿರುವುದಾದರೆ ಇಲ್ಲಿಗೆ ಕರೆದುಕೊಂಡು ಬಂದಿರುವ ಸಾಧ್ಯತೆ ಇದೆ. ಅದಕ್ಕಾಗಿಯೇ ನಿನ್ನನ್ನು ಇಲ್ಲಿಗೆ ಬರೋದಿಕ್ಕೆ ಹೇಳಿದ್ದು'

'ಸರಿ, ಹಾಗಾದರೆ ನಾನು ನಿನ್ನ ಜೊತೆಗೆ ಬರ್ತೀನಿ, ನಡಿ' ಕಾರಿನ ಬಾಗಿಲು ತೆರೆಯಲು ಸನ್ನದ್ಧಳಾದಳು.

'ಮೇನಕಾ, ಬೇಡ. ನೀನು ಕಾರಿನಲ್ಲಿಯೇ ಕುಳಿತಿರು. ನಾನು ಹೋಗಿ ಬರ್ತೀನಿ. ಕಾಶಮ್ಮ ಅಲ್ಲಿರೋದಾದ್ರೆ ನಿನ್ನನ್ನು ಕರಿತೀನಿ. ಆಮೇಲೆ ಬಂದರಾಯ್ತು'

ಕಿರಣ ಅವಳ ಪ್ರತಿಕ್ರಿಯೆಗೂ ಕಾಯದೆ ಕಾರಿಂದ ಹೊರಗೆ ಜಿಗಿದ. ಮೇನಕಾ ಕಾರಿನೊಳಗೆ ಉಳಿದಳು.

ಕಿರಣ 'ಬಂಡೆ'ಯ ಒಳಗೆ ಬಂದಾಗ ಒಂದೆರಡು ಗಿರಾಕಿಗಳನ್ನು ಉಳಿದು ಬೇರೆ ಯಾರೂ ಕಾಣಿಸಲಿಲ್ಲ. ಗಲ್ಲೆಯ ಮೇಲೆ ಕುಳಿತಿದ್ದ ವ್ಯಕ್ತಿಯನ್ನು ವಿಚಾರಿಸಲು ಅತ್ತ ನಡೆದ. ಆ ವ್ಯಕ್ತಿ ಕಿರಣನಿಗೆ ಟೇಬಲ್ ತೋರಿಸಿ ಕುಳಿತುಕೊಳ್ಳುವಂತೆ ಸೂಚಿಸಿತು. ಕಿರಣ ತಲೆಯಲುಗಿಸಿ ಆ ವ್ಯಕ್ತಿಯತ್ತ ನಡೆದ.

'ನಾನು ಬಂದಿರೋದು ಇಲ್ಲಿಯ ಮಾಲೀಕನನ್ನು ಭೇಟಿಯಾಗೋದಿಕ್ಕೆ'

ಗಲ್ಲೆಯಲ್ಲಿ ಕುಳಿತಿದ್ದ ವ್ಯಕ್ತಿ ಎದುರಿಗಿದ್ದವನನ್ನು ಪರೀಕ್ಷಕ ದೃಷ್ಟಿಯಿಂದ ನೋಡಿದ.

ಸುತ್ತಲೂ ಒಮ್ಮೆ ನೋಡಿದ ಕಿರಣ ಪ್ರಶ್ನೆ ಹಾಕಿದ.

'ಅವರೆಲ್ಲಿದ್ದಾರೆ?'

'ನಿಮಗೆ ಸಿಗೋದು ಅಸಾಧ್ಯ' ವಿಚಿತ್ರವಾಗಿತ್ತು ಗಲ್ಲೆಯಲ್ಲಿ ಕುಳಿತಿದ್ದವನ ಮಾತು. ಕಿರಣನಿಗೆ ಆಶ್ಚರ್ಯವಾದರೂ ತೋರಿಸಿದೆ ಅವನನ್ನೇ ನೋಡಿ ಮುಂದಿನ ಪ್ರಶ್ನೆಯನ್ನು ಕೇಳಿದ.

'ಅಂದ್ರೆ, ಇನ್ನೂ ಬಂದಿಲ್ಲವೆ?'

ಗಲ್ಲೆಯಲ್ಲಿದ್ದ ವ್ಯಕ್ತಿ ಅಡ್ಡಡ್ಡಲಾಗಿ ತಲೆಯಲುಗಿಸಿ ತುಟಿ ಸೊಟ್ಟಗೆ ಮಾಡಿ ನಿರಾಶೆಯನ್ನು ವ್ಯಕ್ತಪಡಿಸಿದ.

'ಎಷ್ಟು ಹೊತ್ತಾಗುತ್ತೆ ಬರೋದಿಕ್ಕೆ?'

ಆ ಪ್ರಶ್ನೆಗೂ ಗಲ್ಲೆಯಲ್ಲಿದ್ದ ವ್ಯಕ್ತಿಯದ್ದು ಅದೇ ಉತ್ತರ. ಕಿರಣನಿಗೆ ಅನುಮಾನ ಕಾಡಿತು. ವ್ಯಕ್ತಿ ಸರಿಯಾಗಿ ಉತ್ತರಿಸುತ್ತಿಲ್ಲ!

'ಏನು ನಿಮ್ಮ ಸಂಜ್ಞೆಯ ಅರ್ಥ?' ಕಿರಣನ ಸ್ವಲ್ಪ ಕೋಪ ನಟಿಸಿದ. ವ್ಯಕ್ತಿಯ ಕಣ್ಣುಗಳು ಕಿರಿದಾದವು. ತನ್ನ ಎದುರಿಗುರುವ ವ್ಯಕ್ತಿ ಬಲಾಢ್ಯ! ತನ್ನ ಮಾಲೀಕನಿಗೆ ಆತ್ಮೀಯನವನಾಗಿರಬೇಕು! ಮುಖದ ಬಿಗುವನ್ನು ಸಡಿಲಿಸಿದ.

'ನೀವು ಅವರಿಗೇನಾಗಬೇಕು' ಬಾಲಿಶವಾಗಿ ಪ್ರಶ್ನಿಸಿದ.

'ಅವರು ನನಗೆ ತುಂಬಾ ಹತ್ತಿರದ ಸಂಬಂಧಿ' ಕಿರಣ ತಡೆಯಿಲ್ಲದೆ ಉತ್ತರಿಸಿದ. ವ್ಯಕ್ತಿಯ ಮುಖದಲ್ಲಿ ನಗು ಸುಳಿಯಿತು.

'ನಿಮ್ಮ ಸಂಬಂಧಿಯಾಗಿ ನಿಮಗೆ ತಿಳಿಸಿಲ್ಲವೆ? ಅವರು ಸ್ವಲ್ಪ ದಿನ ಈ ಕಡೆಗೆ ತಲೆ ಹಾಕೋದಿಲ್ಲ' ಒಗಟಿನಂತಿತ್ತು ವ್ಯಕ್ತಿಯ ಮಾತು.

'ಅಂದ್ರೆ, ಊರಲ್ಲಿಲ್ಲವೆ?'

ತಲೆಯಲುಗಿಸಿ ಇಲ್ಲವೆನ್ನುವಂತೆ ಸೂಚಿಸಿದ.

'ಎಲ್ಲಿಗೆ ಹೋಗಿದ್ದಾರೆ ಅನ್ನೋದಾದ್ರೂ ಗೊತ್ತಾ?'

ವ್ಯಕ್ತಿ ಮೇಲಕ್ಕೆ ಮುಖ ಎತ್ತಿ ಕೈ ತಿರುಚಿದ. ಅವನಿಗೂ ಅಸ್ಪಷ್ಟ ಅನ್ನುವಂತೆ ಇತ್ತು ಅವನ ಸಂಜ್ಞೆ. ಕಿರಣನ ಮುಖದಲ್ಲಿ ನಿರಾಶೆ ಕವಿಯಿತು. ಬಾಗಿಲಿನತ್ತ ಹೆಜ್ಜೆ ಹಾಕಿದ. ಗಲ್ಲೆಯಲ್ಲಿದ್ದ ವ್ಯಕ್ತಿ ದುಬುಕ್ಕನೆ ಹಾರಿ ಕಿರಣನ ಪಕ್ಕಕ್ಕೆ ಬಂದು ನಿಂತ.

'ಬನ್ನಿ, ನಿಮಗೆ ವಿಷಯ ತಿಳಿದಿಲ್ಲ ಅನ್ಸುತ್ತೆ' ಕಿರಣನಿಗೆ ಅವನ ವರ್ತನೆಯಿಂದ ಆಶ್ಚರ್ಯವಾಯಿತು. ತಾನು ಪ್ರಶ್ನಿಸುವಾಗ ಬಾಯಿ ಬಿಡದ ವ್ಯಕ್ತಿ ಈಗ ತನ್ನ ಹಿಂದೆಯೇ ಬಂದು ನಿಂತ ರೀತಿಯೇ ವಿಚಿತ್ರವಾಗಿತ್ತು.

ಕಿರಣ ಸಹಜ ಕುತೂಹಲದಿಂದ ತಿಳಿದಿಲ್ಲವೆನ್ನುವಂತೆ ತಲೆಯಲುಗಿಸಿದ.

'ಬನ್ನಿ, ಇಲ್ಲಿ ಕೂತಿರಿ' ಒಂದು ಮೇಜನ್ನು ತೋರಿಸಿದವನೇ ಗಲ್ಲೆಯತ್ತ ನಡೆದು, ಗಲ್ಲೆಯ ಡ್ರಾವರನ್ನು ದೂಡಿ ಬೀಗ ಜಡಿದು ಬಂದು ಕುತೂಹಲದ ನೋಟ ಬೀರಿ ಮತ್ತೊಮ್ಮೆ ಕಿರಣನನ್ನು ಅಳೆದ.

'ನಿಮಗೆ ವಿಷಯ ಗೊತ್ತಿಲ್ಲ, ಅಲ್ವೆ. ನಮ್ಮ ಮಾಲೀಕ ಸದ್ಯಕ್ಕೆ 'ಬಂಡೆ'ಗೆ ಬರೋದಿಲ್ಲ'

ಕಿರಣನಿಗೆ ಕುತೂಹಲ ತಡೆಯಲಾಗಲಿಲ್ಲ.

'ಯಾಕೆ?' ಪ್ರಶ್ನೆ ಸಹಜವಾಗಿ ಮೂಡಿತು.

'ನೀವೇನು ತಗೋತೀರಾ? ಸಾಫ್ಟ್... ಹಾಟ್...'

'ಬೇಡ, ಕಾರಿನಲ್ಲಿ ನಮ್ಮ ಮನೆಯವರಿದ್ದಾರೆ' ನಿರಾಕರಿಸಿದ ಕಿರಣನನ್ನು ನೋಡಿ ಹೊರಗೊಮ್ಮೆ ಇಣುಕು ಹಾಕಿದ ವ್ಯಕ್ತಿ.

'ನೀವು ಅವರಿಗೆ ದೂರದ ಸಂಬಂಧಿ ಹೌದಲ್ಲವೆ? ಇಲ್ಲದಿದ್ದರೆ ಸುದ್ದಿ ನಿಮಗೆ